## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಾಗಲಕೋಟೆ–ಕುಡಚಿ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನ ವೆಚ್ಚಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 35 ರಾರಾಹೆ 2009 ದಿನಾಂಕ : 24.04.2010
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2010, ದಿನಾಂಕ: 25.02.2011, 19.07.2012, 19.07.2012, 19.07.2012, 07.03.2013, 30.03.2013,
3. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 72 ರಾರಾಹೆ 2013, ದಿನಾಂಕ:06.12.2013, 29.03.2014, 19.08.2014, 28.03.2015, 29.09.2015, 05.02.2016, 25.02.2016, 15.03.2016 14.09.2016, 03.11.2016. 03.11.2016. 05.11.2016. 05.08.2017. 16.09.2017, 22.09.2017(ಭಾಗ–2),
4. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018, ದಿನಾಂಕ:12.09.2018. 12.09.2018, 09.10.2018,17.11.2018, 25.04.2019, 25.04.2019
5. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 25 ರಾರಾಹೆ 2019 ದಿನಾಂಕ:12.06.2019, 12.06.2019, 12.06.2019
6. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018 ದಿನಾಂಕ:30.03.2020, 25.08.2020.
7. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 77 ರಾರಾಹೆ 2021 (IV)ದಿನಾಂಕ:26.03.2021.
8. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 46 ರಾರಾಹೆ 2018 ದಿನಾಂಕ:06.07.2021, 30.07.2021, 01.10.2021,26.11.2021.
9. ಪತ್ರ ಸಂಖ್ಯೆ: ಕ್ರ.ಭೂಸ್ವಾ: ವಿವಹಿ.ಗೋ.211/211ಎ/2012–13, ದಿನಾಂಕ:03.09.2021, ಉಪವಿಭಾಗಾಧಿಕಾರಿ, ಬೈಲಹೊಂಗಲ.

**ಪ್ರಸ್ತಾವನೆ:**

1) ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರಿ ಆದೇಶದಲ್ಲಿ ಬಾಗಲಕೋಟೆ – ಕುಡಚಿ ಹೊಸ ರೈಲು ಮಾರ್ಗ ಯೋಜನೆಯನ್ನು 50:50 ಸಹಭಾಗಿತ್ವ ಆಧಾರದಡಿ ಕೈಗೆತ್ತಿಕೊಳ್ಳಲು ಹಾಗೂ ಅಗತ್ಯ ಜಮೀನನ್ನು ಉಚಿತವಾಗಿ ನೀಡಲು ಅನುಮೋದನೆ ನೀಡಲಾಗಿದೆ.

2) ಮೇಲೆ ಓದಲಾದ ಕ್ರ.ಸಂ (2) ರಿಂದ (8)ರಲ್ಲಿ ಸರ್ಕಾರದ ಆದೇಶಗಳಲ್ಲಿ ಬಾಗಲಕೋಟೆ – ಕುಡಚಿ ಹೊಸ ರೈಲು ಮಾರ್ಗ ಯೋಜನೆಗಾಗಿ ನೈರುತ್ಯ ರೈಲ್ವೆಗೆ ಒಟ್ಟಾರೆಯಾಗಿ ರೂ.195.22 ಕೋಟಿ ಬಿಡುಗಡೆಗೊಳಿಸಲಾಗಿದ್ದು, ಭೂಸ್ವಾಧೀನ ವೆಚ್ಚಕ್ಕಾಗಿ ಒಟ್ಟಾರೆಯಾಗಿ ರೂ. 354.11 ಕೋಟಿಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಒಟ್ಟಾರೆಯಾಗಿ ಈ ಕಾಮಗಾರಿಗೆ ರೂ. 549.33 ಕೋಟಿಗಳ ಅನುದಾನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

3) ಮೇಲೆ ಓದಲಾದ ಕ್ರ.ಸಂ (9) ಮತ್ತು ರ ಪತ್ರದಲ್ಲಿ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ ಇಲ್ಲಿ ಬಾಗಲಕೋಟೆ–ಕುಡುಚಿ ರೈಲ್ವೆ ಲೈನ್ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕಾಮನಕಟ್ಟಿ ಗ್ರಾಮದ ಹದ್ದಿ ಮತ್ತು ಯಾದವಾಡ ಗ್ರಾಮದ ಹದ್ದಿಯಲ್ಲಿ ಭೂಸ್ವಾಧೀನತೆ ಕುರಿತಂತೆ ಬಾಕಿ ಇರುವ ಎಲ್.ಎ.ಸಿ ಪ್ರಕರಣಗಳ ಪೈಕಿ 43 ಎಲ್.ಎ.ಸಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಈಗಾಗಲೇ ತೀರ್ಮಗೊಂಡ 7 ಎಲ್.ಎ.ಸಿ. ಪ್ರಕರಣ ಸಂಖ್ಯೆ: 396/2017, 397/2017, 398/2017, 510/2017, 581/2017, 585/2017 ಮತ್ತು 586/2017 ಪ್ರಕರಣಗಳ ಮಾದರಿಯಲ್ಲಿಯೇ ನಿಗದಿಪಡಿಸಲಾದ ಪರಿಹಾರ ಮೊತ್ತವನ್ನು ನಿಗದಿಪಡಿಸಲು ಭೂಮಾಲೀಕರು ಒಪ್ಪಿಗೆ ಸೂಚಿಸಿರುತ್ತಾರೆ. ಆದ್ದರಿಂದ ಮಾನ್ಯ ನ್ಯಾಯಾಲಯವು ಜಿಲ್ಲಾ ಸರ್ಕಾರಿ ವಕೀಲರಿಗೆ ಬೃಹತ್ ಲೋಕ್ ಅದಾಲತ್ ನಲ್ಲಿ ರಾಜೀ ಮೂಲಕ

ಪರಿಹರಿಸಲು ಸೂಚಿಸಿದ್ದು, ಅದರಂತೆ ನ್ಯಾಲಯದಲ್ಲಿ ಠೇವಣಿ ಇರಿಸಲು ರೂ.1,50,34,533.00/-ಳನ್ನು ಉಪವಿಭಾಗಾಧಿಕಾರಿಗಳು , ಬೈಲಹೊಂಗಲ ಉಪವಿಭಾಗ, ಇವರಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

4) ಉಪ-ವಿಭಾಗಾಧಿಕಾರಿಗಳು, ಬೈಲಹೊಂಗಲ ಇವರ ಮೇಲಿನ ಪ್ರಸ್ತಾವಯನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಮೂಅಇ 08 ರಾರಾಹೆ 2021(ಭಾಗ-1)**

**ಬೆಂಗಳೂರು, ದಿನಾಂಕ:07.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ-ಕುಡುಚಿ ರೈಲ್ವೆ ಲೈನ್ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕಾಮನಕಟ್ಟಿ ಗ್ರಾಮದ ಹದ್ದಿ ಮತ್ತು ಯಾದವಾಡ ಗ್ರಾಮದ ಹದ್ದಿಯಲ್ಲಿ ಭೂಸ್ವಾಧೀನತೆ ಕುರಿತಂತೆ ಬಾಕಿ ಇರುವ ಎಲ್.ಎ.ಸಿ ಪ್ರಕರಣಗಳ ಪೈಕಿ 43 ಎಲ್.ಎ.ಸಿ ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಈಗಾಗಲೇ ತೀರ್ಪುಗೊಂಡ 7 ಎಲ್.ಎ.ಸಿ. ಪ್ರಕರಣ ಸಂಖ್ಯೆ: 396/2017, 397/2017, 398/2017, 510/2017, 581/2017, 585/2017 ಮತ್ತು 586/2017 ನ್ಯಾಯಾಲಯಗಳ ಪ್ರಕರಣಗಳಿಗೆ ನ್ಯಾಯಾಲಯವು ನೀಡಿರುವ ಆದೇಶದಂತೆ ನ್ಯಾಯಾಲಯದಲ್ಲಿ ಠೇವಣಿ ಇರಿಸಲು ಒಟ್ಟಾರೆಯಾಗಿ ರೂ. 1,50,34,533.00/-ಗಳ (ರೂಪಾಯಿ ಒಂದು ಕೋಟಿ ಐವತ್ತು ಲಕ್ಷದ ಮೂವತ್ತನಾಲ್ಕು ಐನೂರ ಮೂವತ್ತ ಮೂರು ರೂಪಾಯಿಗಳು ಮಾತ್ರ) ಅನುದಾನವನ್ನು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರಿಗೆ ಬಿಡುಗಡೆಗೊಳಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2) ಈ ಮೊತ್ತವನ್ನು 2021-22 ನೇ ಸಾಲಿನಲ್ಲಿ ಒದಗಿಸಿರುವ ಅನುದಾನದ ಲೆಕ್ಕ ಶೀರ್ಷಿಕೆ **"5465-01-190-3-05-132 - ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ - ಬಂಡವಾಳ ವೆಚ್ಚಗಳು"** ಇದರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3) ಈ ಮೊತ್ತವನ್ನು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಖಾತೆಗೆ ಖಜಾನೆ-2 ರಲ್ಲಿ ಅಪ್‌ಲೋಡ್ ಮಾಡುವುದು. ಸದರಿ ಮೊತ್ತವನ್ನು ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರು ಖಜಾನೆ-2 ರಲ್ಲಿ ಡ್ರಾ ಮಾಡಲು ಅಧೀಕರಿಸಿದೆ.

4) ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ ಇವರು ಈ ಹಣವನ್ನು ವೆಚ್ಚ ಮಾಡಿದ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಮೂಲಕ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

5) ಈ ಆದೇಶವನ್ನು ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ :ಆಇ 01 TFP 2021, ದಿನಾಂಕ:31.12.2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಅಪ್ಪನಗೌಡ.ಬಿ.ಪಾಟೀಲ್),**
ಸರ್ಕಾರದ ಅಧೀನ ಕಾರ್ಯದರ್ಶಿ-2
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಆಡಿಟ್ - 1, 2, 3/ ಂ & ಇ), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು- 01.

2. ಮುಖ್ಯ ವ್ಯವಸ್ಥಾಪಕರು, (ನಿರ್ಮಾಣ) ನೈರುತ್ಯ ರೈಲ್ವೆ ನೈರುತ್ಯ ರೈಲ್ವೆ, ಕೇಶವಪುರ, ಹುಬ್ಬಳ್ಳಿ
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ.
4. ಮುಖ್ಯ ಆಡಳಿತಾಧಿಕಾರಿ( ನಿರ್ಮಾಣ), ನೈರುತ್ಯ ರೈಲ್ವೆ, 18 ಮಿಲ್ಲರ್ಸ್ ರಸ್ತೆ, ಬೆಂಗಳೂರು.
5. ಮುಖ್ಯ ಅಭಿಯಂತರರು (ನಿರ್ಮಾಣ) ನೈರುತ್ಯ ರೈಲ್ವೆ, ಕೇಶವಪುರ, ಹುಬ್ಬಳ್ಳಿ.
6. ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು
7. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
8. ಉಪ ವಿಭಾಗಾಧಿಕಾರಿ, ಬೈಲಹೊಂಗಲ, ಬೈಲಹೊಂಗಲ ಜಿಲ್ಲೆ.
9. ಖಜಾನೆ ನಿರ್ದೇಶಕರು, ವಿ. ವಿ ಗೋಪುರ, ಬೆಂಗಳೂರು.
10. ಆಯುಕ್ತರು, ಟಿ. ಎನ್. ಎಂ. ಸಿ., ಖನಿಜ ಭವನ, ಬೆಂಗಳೂರು.
11. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು
14. ಸರ್ಕಾರದ ಅಪರ ಕಾರ್ಯದರ್ಶಿ (ರೈಲ್ವೆ) ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು
15. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
16. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.